ಆ) ಹಾಗಿದ್ದಲ್ಲಿ, ಅದು ಈಗ ಯಾವ ಹಂತದಲ್ಲಿದೆ,

ಇ) ಈ ನೇಮಕಾತಿಯಲ್ಲಿ ಇಷ್ಟೊಂದು ವಿಳಂಬವಾಗಿರುವ ಕಾರಣಗಳೇನು, ಮತ್ತು ಆಯ್ಕೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಯವರು).—

ಅ) ೫-೪-೧೯೮೪ ರಂದು ಅರ್ಜಿಗಳನ್ನು ಕರೆಯಲಾಗಿದೆ.

ಆ) ಇದುವರೆವಿಗೆ ಲಿಖಿತ ಪರೀಕ್ಷೆ, ದೈಹಿಕ ಸಾಮರ್ಥ್ಯ ಪರೀಕ್ಷೆ ಮತ್ತು ವಾಕ್ ಪರೀಕ್ಷೆಗಳು ಮುಗಿದಿವೆ.

ಇ) ಇಲಾಖಾ ನೇಮಕಾತಿ ಸಮಿತಿಯನ್ನು ಪುನರ್ ರಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ, ಇದು ಮೌಖಿಕ ಪರೀಕ್ಷೆ ನಡೆಸಿ ಆಯ್ಕೆ ಪಾಡಿದ ಅಭ್ಯರ್ಥಿಗಳ ಪಟ್ಟಿಯನ್ನು ಪೂರ್ಣಗೊಳಿಸುವುದು. ಈ ಆಯ್ಕೆಯನ್ನು ಆರು ತಿಂಗಳ ಒಳಗಾಗಿ ಪೂರ್ಣಗೊಳಿಸುವ ನಿರೀಕ್ಷೆ ಇದೆ.

ವೈದ್ಯಾಧಿಕಾರಿಗಳ ನೇಮಕ

೨೮೮೨ ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಗ್ರಾಮೀಣ ಪ್ರದೇಶದಲ್ಲಿರುವ ಹಲವಾರು ಪ್ರಾಥಮಿಕ ಆರೋಗ್ಯ ಕೇಂದ್ರ ಘಟಕಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗೆ ನೇಮಕ ಮಾಡಲು ಸರ್ಕಾರದವರು ಯಾವ ಕ್ರಮ ಕೈಕೊಂಡಿದ್ದಾರೆ.

ಆ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳಿಗೆ ಯಾವಾಗ ನೇಮಕ ಮಾಡಲಾಗುವುದು.

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಸರ್ಕಾರಿ ಆದೇಶ ಸಂಖ್ಯೆ ಆಕುಕ ೪೪೪ ಎಸ್‌ಎಸ್‌ಹೆಚ್ ೮೮ ದಿನಾಂಕ ೯-೮-೧೯೮೮ ರಲ್ಲಿ ೧೮೦ ಪುರುಷ ಮತ್ತು ೫೦ ಮಹಿಳಾ ವೈದ್ಯಾಧಿಕಾರಿಗಳನ್ನು ರಾಜ್ಯದ ಗ್ರಾಮೀಣ ಪ್ರದೇಶದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಘಟಕಗಳಿಗೆ ಈಗಾಗಲೇ ನೇಮಿಸಲಾಗಿದೆ. ಇನ್ನೂ ೨೪೨ ಹುದ್ದೆಗಳು (೧೮೪ ಪುರುಷ ಮತ್ತು ೫೮ ಮಹಿಳಾ ವೈದ್ಯಾಧಿಕಾರಿಗಳು) ಖಾಲಿ ಇದ್ದು ಇವುಗಳನ್ನು ತುಂಬಲು ಕ್ರಮ ಜರುಗಿಸಲಾಗುತ್ತಿದೆ.

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಎಂಜಿನೀಯರಿಂಗ್ ಮೈಸೂರು ಸಂಸ್ಥೆಗೆ ನಿವೇಶನಗಳನ್ನು ಮಂಜೂರಾತಿ ಮಾಡುವ ಕುರಿತು.

೪೯೫೫ ಶ್ರೀ ವೇದಾಂತ ಹೆಬ್ಬಾಗಿ, (ಕೃಷ್ಣರಾಜ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿರಿಂಗ್ ಸಂಸ್ಥೆಯ ಹಳೇ ವಿದ್ಯಾರ್ಥಿಗಳ ಸಹಕಾರ ಸಂಘದ ಸದಸ್ಯರುಗಳಿಗೆ ಹಿಂದಿನ ನಗರಾಭಿವೃದ್ಧಿ ಸಮಿತಿಯು ನಿವೇಶನಗಳನ್ನು ಕೊಡಲು ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ.

೨) ಈ ಅರ್ಜಿದಾರರಿಂದ ನಿವೇಶನಗಳಿಗೆ ಸ್ವೀಕರಿಸಿರುವ ಹಣದ ಮೊತ್ತ ಎಷ್ಟು ಮತ್ತು ಎಷ್ಟು ತಿಂಗಳುಗಳ ಹಿಂದೆ ಈ ಹಣವನ್ನು ಕಟ್ಟಿಸಿಕೊಳ್ಳಲಾಯಿತು.

ಶ್ರೀ ಆರ್. ವಿ. ದೇಶಪಾಂಡೆ, (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧) ಆ ಮಂದಿರ ಯೋಜನೆಯಡಿಯಲ್ಲಿ (ಹೆಚ್ಚು ಆದಾಯ ವರ್ಗ) ೧೫೯ ಅರ್ಜಿಗಳನ್ನು ಸ್ವೀಕರಿಸಲಾಗಿದೆ.

೨) ಒಟ್ಟು ೪೨,೮೭,೨೪೦ ರೂ. ಗಳನ್ನು ಡಿಸೆಂಬರ್ ೧೯೮೭ರಲ್ಲಿ ಕಟ್ಟಿಸಿಕೊಳ್ಳಲಾಗಿದೆ.